ಈ) 1991-92ನೇ ಸಾಲಿಗೆ ತುಮಕೂರು ಜಿಲ್ಲೆಯಲ್ಲಿ 35 ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಿದ್ದು ಮತ್ತು 10 ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲು ಪ್ರಸ್ತಾವನೆಗಳು ಬಂದಿರುತ್ತವೆ.

ಕುಣಿಗಲ್‌ನಲ್ಲಿರುವ ಬಸ್ ನಿಲ್ದಾಣದ ಸ್ಥಿತಿಯ ಬಗ್ಗೆ

285 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಣಿಗಲ್‌ನಲ್ಲಿ ಇರುವ ಬಸ್ ನಿಲ್ದಾಣದ ಸ್ಥಿತಿಯು ಕೆಟ್ಟಿರುವ ವಿಷಯ ಮತ್ತು ಬಸ್ ನಿಲ್ದಾಣವು ಸಂಚಾರದ ಅವಶ್ಯಕತೆಗಳನ್ನು ಪೂರೈಸಲು ಸಾಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಕುಣಿಗಲ್‌ನಲ್ಲಿ ವಿಶಾಲವಾದ ಬಸ್ ನಿಲ್ದಾಣವನ್ನು ಕಟ್ಟುವ ಪ್ರಸ್ತಾವನೆ ಇದೆಯೇ?*

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಹೌದು

ಆ) ಹೌದು

ತುಮಕೂರು ಜಿಲ್ಲೆಯಲ್ಲಿರುವ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳ ಸಂಖ್ಯೆ

286 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆಯಲ್ಲಿರುವ ವೈದ್ಯಕೀಯ, ವಿಜ್ಞಾನ, ಕಲಾ, ವಾಣಿಜ್ಯ, ತಾಂತ್ರಿಕ ಮತ್ತು ಕಾನೂನು ಕಾಲೇಜುಗಳ ಸಂಖ್ಯೆ;*

ಆ) *ಮೇಲ್ಕಂಡ ಎಲ್ಲಾ ಕಾಲೇಜುಗಳು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿವೆಯೇ?*

ಇ) *ತುಮಕೂರು ಜಿಲ್ಲೆಯಲ್ಲಿರುವ ಕಾಲೇಜುಗಳಲ್ಲಿ ಪದವಿ ತರಗತಿ ತೇರ್ಗಡೆಯಾದವರು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಬೆಂಗಳೂರಿಗೇ ಬರಬೇಕೆಂದು ಸರ್ಕಾರಕ್ಕೆ ಗೊತ್ತಿದೆಯೆ?*

ಈ) *ತುಮಕೂರಿನಲ್ಲಿ ಸರ್ಕಾರವೇನಾದರೂ ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ತುಮಕೂರು ಜಿಲ್ಲೆಯಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಲು ಏನಾದರೂ ಸೂಕ್ತ ಕ್ರಮ ತೆಗೆದುಕೊಂಡಿದೆಯೇ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮಂತ್ರಿಗಳು) :

ಅ) 1.ತಾಂತ್ರಿಕ ಕಾಲೇಜು -3

2. ವೈದ್ಯಕೀಯ ಕಾಲೇಜು -1

3. ಔಷಧ ವಿಜ್ಞಾನ -1

4. ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜು -17

5. ಕಾನೂನು ಕಾಲೇಜು -1

6. ಶಿಕ್ಷಣ ಕಾಲೇಜು -4

ಆ) ಹೌದು

ಇ) ಹೌದು

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.